**ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ –**

ನೀವು ಪಿಕ್ ಅಪ್ ವಾಹನದ ಚಾಲಕನಾಗಿರುತ್ತೇನೆ ಎಂದು ಹೇಳಿದ್ದು, ಸದರಿ ವಾಹನದ ಸಂಖ್ಯೆ ಹೇಳಲು ಬರುತ್ತದೆಯೇ? ಎಂದರೆ ಸಾಕ್ಷಿ ದಿನಾಲು ವಾಹನಗಳು ಬದಲಾಗುತ್ತಿದ್ದು, ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹೆಚ್ಚುವರಿ ಚಾಲಕನಾಗಿದ್ದು, ಯಾವ ವಾಹನಕ್ಕೆ ಚಾಲಕನ ಅವಶ್ಯಕತೆ ಇರುತ್ತದೆ ಸದರಿ ವಾಹನಕ್ಕೆ ಚಾಲಕನಾಗಿ ಹೋಗುತ್ತೇನೆ. ನಮ್ಮ ಊರಿನಿಂದ ಆರ್.ಎಂ.ಸಿ 3 ರಿಂದ 4 ಕಿಲೋ ಮೀಟರ್ ಅಂತರದಲ್ಲಿ ಇರುತ್ತದೆ. ನಾನು ಚಾಲಕನಾಗಿ ಕೆಲಸ ಮಾಡಿಕೊಂಡಿರುತ್ತೇನೆ. ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ಚಾಲಕನಅವಶ್ಯಕತೆ ಇದ್ದಾಗ ಮಾತ್ರ ನಾನು ನಮ್ಮ ಊರಿನಿಂದ ಆರ್.ಎಂ.ಸಿಗೆ ಬರುತ್ತೇನೆ.

ನಾನು ಆರ್.ಎಂ.ಸಿಯ ಬಳಿ ದಿಃ– 21.07.2023 ರಂದು ಬಂದಿರುತ್ತೇನೆ ಎಂದು ಹೇಳಿದ್ದು, ಯಾವ ವಾಹನಕ್ಕೆ ಚಾಲಕನಾಗಿ ಬಂದಿರುತ್ತೇನೆ ಎಂದರೆ ಸಾಕ್ಷಿಯು ಬುಲೆರೋ ವಾಹನಕ್ಕೆ ಬಂದಿರುತ್ತೇನೆ, ಆದರೆ ಅದರ ನಂಬರ್ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಾಹನದ ಮಾಲೀಕರ ಹೆಸರು ನನಗೆ ತಿಳಿದಿರುವುದಿಲ್ಲ.

ನಾನು ಆ ದಿನ ಕೇರಳಕ್ಕೆ ವಾಹನವನ್ನು ತೆಗೆದುಕೊಂಡು ಹೋಗಿ ವಾಪಸ್ಸು ಬಂದಿರುತ್ತೇನೆ. ಕೇರಳಕ್ಕೆ ಯಾವಾಗ ಮೈಸೂರಿನಿಂದ ಹೊರಟಿರುತ್ತೀರಿ? ಎಂದರೆ ಸಾಕ್ಷಿಯು 21.07.2023 ರ ಹಿಂದಿನ ದಿನಕ್ಕೆ ಕೇರಳಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಯಾವ ವಸ್ತುಗಳನ್ನು ಲೋಡ್ ಮಾಡಿಕೊಂಡು ಹೋಗಿರುತ್ತೀರಿ? ಎಂದರೆ ಸಾಕ್ಷಿಯು ತರಕಾರಿಯನ್ನು ಲೋಡ್ ಮಾಡಿಕೊಂಡು ಕೊಚ್ಚಿನ್ ಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಕೊಚ್ಚಿನ್ ನಿಂದ ಅನ್

ಲೋಡ್ ಮಾಡಿಕೊಂಡು ಎಷ್ಟು ಗಂಟೆಗೆ ಬಿಟ್ಟಿರುತ್ತೀರಿ ಎಂದರೆ ಸಾಕ್ಷಿಯು ಸುಮಾರು ಬೆಳಿಗ್ಗೆ 6 ಗಂಟೆ ಸುಮಾರಿಗೆ ಮೈಸೂರಿಗೆ ಹೊರಟಿರುತ್ತೇವೆ ಎಂದು ನುಡಿಯುತ್ತಾರೆ.

ನೀವು ಸಾಮಾನ್ಯವಾಗಿ ದೂರದ ಊರಿಗೆ ವಾಹನ ಚಲಾಯಿಸಿಕೊಂಡು ಹೋಗಿ ವಸ್ತುಗಳನ್ನು ಅನ್ ಲೋಡ್ ಮಾಡಿ ಬರುವುದು ನಿಮ್ಮ ಕೆಲಸವಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ವಾಹನ ಚಲಾವಣೆಯ ಪರವಾನಗಿ ನನ್ನ ಬಳಿ ಇದ್ದು, ನಾನು ಪೊಲೀಸರಿಗೆ ನೀಡಿರುವುದಿಲ್ಲ. ಆದಾರ್ ಕಾರ್ಡ್ ಮತ್ತು ಲೈಸನ್ಸನಲ್ಲಿ ವಿ. ಮಹದೇವಸ್ವಾಮಿ ಎಂದು ನನ್ನ ಹೆಸರು ನಮೂದು ಆಗಿರುತ್ತದೆ. ಚೇತನ್ ಎನ್ನುವ ಹೆಸರು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ.

ಪೊಲೀಸರು ಈ ಹಿಂದೆ ನಿಮ್ಮ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆಯೇ? ಎಂದರೆ ಸಾಕ್ಷಿಯು ದಾಖಲೆಗೆ ಸಹಿ ಪಡೆಯುವ ದಿನ ವಿಚಾರಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗೆ ಮೃತನನ್ನು ನೋಡಿದ್ದೆ ಎಂದು ಹೇಳಲಾದ ದಿನಾಂಕ ಸಹಿ ಮಾಡಿರುತ್ತೇನೆ.

ಬುಲೆರೋ ವಾಹನ ಗೂಡ್ಸ್ ವಾಹನ ಆಗಿರುತ್ತದೆ. ನಿಮ್ಮ ಹೇಳಿಕೆಯಲ್ಲಿ ನಾನು ಬುಲೆರೋ ಗೂಡ್ಸ ವಾಹನವನ್ನು ಓಡಿಸುತ್ತಿದ್ದು, ಆ ದಿನ ತರಕಾರಿಯನ್ನು ಅನ್ ಲೋಡ್ ಮಾಡಲು ಹೋಗಿದ್ದೆ ಎಂದು ಹೇಳಿರುತ್ತೀರಿಯೇ? ಎಂದರೆ ಸಾಕ್ಷಿ ಬುಲೆರೋ ವಾಹನ ಓಡಿಸಿರುವ ಬಗ್ಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಪೊಲೀಸರ ಮುಂದೆ ಆ ದಿನ ಕೊಚ್ಚಿನ್ ಗೆ ಹೋಗಿ ಕೆಲಸ ಮುಗಿಸಿಕೊಂಡು ಬಂದಿರುವ ಬಗ್ಗೆ ಹೇಳಿರುತ್ತೀರಿಯೇ? ಎಂದರೆ ಸಾಕ್ಷಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪೊಲೀಸರ ಮುಂದೆ ದಿಃ- 21.06.2023 ರಂದು ಬೆಳಿಗ್ಗೆ ನನ್ನ ಗೂಡ್ಸ ವಾಹನಕ್ಕೆ ಬಾಡಿಗೆಗೆ ಆರ್.ಎಂ.ಸಿ ಗೆ ಹೋಗಿದ್ದು, ಆಷಾಡ ಮಾಸವಾಗಿದ್ದು ಶುಭ ಸಮಾರಂಭಕ್ಕೆ ಬಾಡಿಗೆ ಯಾವುದು

ಸಿಗಲಿಲ್ಲ, ನಂತರ ಸಂಜೆವರೆಗೆ ಕಾದು ಗೂಡ್ಸ ವಾಹನದಲ್ಲಿ ಊರಿಗೆ ಹೋಗುತ್ತಿದೆ ಎಂದು ಹೇಳಿರುತ್ತೀರಿಯೇ? ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಹೇಳಿಕೆ ಭಾಗವನ್ನು ನಿಶಾನೆ ಡಿ–1 ಎಂದು ಗುರುತಿಸಲಾಯಿತು.

ಆರ್.ಎಂ.ಸಿ ಮತ್ತು ಅಕ್ಕ–ಪಕ್ಕ ಅಂಗಡಿಯನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ಸದರಿ ಆರ್.ಎಂ.ಸಿ ಮತ್ತು ಅಕ್ಕ–ಪಕ್ಕದ ಅಂಗಡಿಯ ಮುಂಗಟ್ಟುಗಳ ಮುಂದೆ ಸುಮಾರು ಜನ ಬಿಕ್ಷುಕರು ಸಾಮಾನ್ಯವಾಗಿ ಮಲಗುತ್ತಾರೆ ಎಂದರೆ ಸರಿ. ನಾನು ಮಧ್ಯಪಾನ ಮತ್ತು ದೂಮಪಾನ ಮಾಡುವುದಿಲ್ಲ.

ಪೊಲೀಸರ ಮುಂದೆ ಹೇಳಿದ ಹೇಳಿಕೆಯಲ್ಲಿ ಕ್ಯಾಷ್ ಕೌಂಟರ್ ಹತ್ತಿರ ನಿಂತು ಟೀ ಆರ್ಡರ್ ಮಾಡಿ ಸಿಗರೇಟ್ ಸೇದುವ ಸಲುವಾಗಿ ಸದರಿ ಟೀ ಸ್ಟಾಲಿನ ಬಲಭಾಗಕ್ಕೆ ಇರುವ ದುಸ್ಥಿತಿಯಲ್ಲಿರುವ ಮಳಿಗೆ ಕಟ್ಟಡದ ಮುಂದೆ ಸಿಗರೇಟ್ ಸೇದಿ ಬಂದೆ ಎಂದು ಹೇಳಿಕೆ ನೀಡಿರುತ್ತೀರಿಯೇ? ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಹೇಳಿಕೆ ಭಾಗವನ್ನು ನಿಶಾನೆ ಡಿ–1(ಎ) ಎಂದು ಗುರುತಿಸಲಾಯಿತು.

ನನ್ನ ಸ್ವಂತ ವಾಹನ ಇರುವುದಿಲ್ಲ. ನಾನು ನನ್ನ ಸ್ನೇಹಿತ ಮೋನುವಿನ ಜೊತೆಗೆ ಆರ್.ಎಂ.ಸಿಗೆ ನಮ್ಮ ಊರಿನಿಂದ ಬರುತ್ತೇನೆ. ನನ್ನ ಬಳಿ ಪೋನ್ ಇರುತ್ತದೆ. ಅದರ ನಂಬರ್ಃ–7022287994 ಆಗಿರುತ್ತದೆ. ಕೇರಳಕ್ಕೆ ಹೋಗಲು ಯಾರಿಂದ ಯಾವ ನಂಬರಿನಿಂದ ಪೋನ್ ಕರೆ ಬಂದಿರುತ್ತದೆ ಎಂದು ಹೇಳಲು ಬರುವುದಿಲ್ಲ. ಪೊಲೀಸರ ಮುಂದೆ ಕೇರಳಕ್ಕೆ ಹೋಗಲು ಪೋನ್ ಕರೆ ಬಂದ ಬಗ್ಗೆ ಹೇಳಿರುವುದಿಲ್ಲ.

ದುರಸ್ಥಿಯಲ್ಲಿರುವ ಮಳಿಗೆಗೆ ಯಾವುದೇ ರೀತಿಯ ವಿದ್ಯುತ್ ಸಂಪರ್ಕ ಇರುವುದಿಲ್ಲ, ಗೋಡೆಗಳೆಲ್ಲಾ ಬಿದ್ದಿರುತ್ತವೆ ಮತ್ತು ಅದಕ್ಕೆ ಯಾವುದೇ ಬಾಗಿಲು ಅಥವಾ ಶೆಟರ್ ಇರುವುದಿಲ್ಲ ಎಂದರೆ ಸರಿ. ಸದರಿ ಮಳಿಗೆಗೆ ಹಿಂದೆ-ಮುಂದೆ ಓಪನ್ ಇರುತ್ತದೆ ಎಂದರೆ ಸರಿ.

ದಿಃ- 21.07.2021 ರಂದು ಟಿ ಅಂಗಡಿ ಬಳಿ ಹೋಗಿರುತ್ತೇನೆ ಎಂದು ಹೇಳಿದ್ದು ಆ ದಿನ ನಿನಗೆ ಪರಿಚಯಸ್ಥರು ಎಷ್ಟು ಜನ ಇದ್ದರು? ಎಂದರೆ ಸಾಕ್ಷಿಯು ಸುಮಾರು 8 ರಿಂದ 10 ಜನ ಇದ್ದರು ಎಂದು ನುಡಿಯುತ್ತಾರೆ.

ನಿಮ್ಮ ಮುಖ್ಯ ವಿಚಾರಣೆಯಲ್ಲಿ ಟೀ ಕುಡಿಯುತ್ತಿದ್ದಾಗ, ಪಕ್ಕದಲ್ಲಿ ಶಿಥಿಲಗೊಂಡ ಮಳಿಗೆಯಿಂದ ಶಬ್ದ ಬಂದ ಕಾರಣ ಶ್ಯಾಮ್ ಲಾಲ್ ಸದರಿ ಸ್ಥಳಕ್ಕೆ ಹೋದರು ಎಂದು ಹೇಳಿದ್ದು, ನಂತರ ನೀವು ಕೂಡ ಹೋಗಿರುತ್ತೀರಿ ಎಂದು ಹೇಳಿದ್ದು, ಶ್ಯಾಮ್ ಲಾಲ್ ಹೋದ ಎಷ್ಟು ನಿಮಿಷಕ್ಕೆ ನೀವು ಹೋಗಿರುತ್ತೀರಿ? ಎಂದರೆ ಸಾಕ್ಷಿಯು 2 ರಿಂದ 3 ನಿಮಿಷಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಜೊತೆ ಇದ್ದ ಎಲ್ಲರೂ ಬಂದಿರುವುದಿಲ್ಲ, ಕೇವಲ 3 ರಿಂದ 4 ಜನ ಬಂದಿದ್ದರು. ಆ ಸಮಯದಲ್ಲಿ ಸಂಜೆ 7 ಗಂಟೆ ಆಗಿದ್ದು, ಮಳಿಗೆಗಳಲ್ಲಿ ಲೈಟ್ ಬೆಳಕು ಇತ್ತು ಎನ್ನುವ ವಿಚಾರ ಮೊದಲನೆ ಬಾರಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೈಟ್ ಇತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಮ್ಮ ಮುಖ್ಯ ವಿಚಾರಣೆಯಲ್ಲಿ ನಾನು ಅಲ್ಲಿಗೆ ಹೋದಾಗ ಒಬ್ಬ ವಯಸ್ಸಾದ ವ್ಯಕ್ತಿ ಇದ್ದು, ಆತನ ಕತ್ತಿನ ಬಳಿಯಲ್ಲಿ ರಕ್ತವಾಗಿತ್ತು. ಆತ ಅಲ್ಲಿಯೇ ಬಿದಿದ್ದು, ಅಲ್ಲಿಯೇ ಆರೋಪಿಯನ್ನು ನೋಡಿರುತ್ತೇನೆ, ಆತ ಪಕ್ಕದಲ್ಲಿ 4 ಅಡಿ ಅಂತರದಲ್ಲಿ ಕುಳಿತಿದ್ದ ಎಂದು ಹೇಳಿದ್ದು, ಸದರಿ

ಆರೋಪಿಯನ್ನು ಹೋಗಿ ಏನಾಯಿತ್ತೆಂದು ಪ್ರಶ್ನಿಸಿರುತ್ತೀರಿಯೇ? ಎಂದರೆ ಸಾಕ್ಷಿಯು ನಾನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

ಪೊಲೀಸರ ನೀಡಿದ ಹೇಳಿಕೆಯಲ್ಲಿ 'ಶ್ಯಾಮ್ ಲಾಲ್ ಟೀ ಸ್ಟಾಲಿನಲ್ಲಿ ಬೀಡಿ ತೆಗೆದುಕೊಂಡು ಹೋಗಿದ್ದ ಅಂದಾಜು 20 ರಿಂದ 22 ವರ್ಷದ ಚಿಂದಿ ಆಯುವ ವ್ಯಕ್ತಿ ಅಲ್ಲಿದ್ದ ವಯಸ್ಸಾದ ಅಪರಿಚಿತ ಅಂದಾಜು 60 ವರ್ಷದ ವಯಸ್ಸಿನ ಗಂಡಸಿಗೆ ನಿನ್ನನ್ನು ಮುಗಿಸುತ್ತೇನೆ ಮಗನೇ ಎಂದು ಅಲ್ಲೇ ಬಿದಿದ್ದ ಸಿಮೆಂಟ್ ಇಟ್ಟಿಗೆ ಚೂರಿನಿಂದ ಹೊಡೆಯುತ್ತಿದ್ದು, ನಮ್ಮಗಳನ್ನು ನೋಡಿದ ಆತ ತನ್ನ ಕೈಯಲ್ಲಿ ಚಿಂದಿ ಎತ್ತುವ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಎತ್ತಿಕೊಂಡು ಸಿಮೆಂಟ್ ಇಟ್ಟಿಗೆ ಚೂರನ್ನು ಮಳಿಗೆಯ ಎದುರಿಗೆ ಬೆಳೆದಿರುವ ಎಕ್ಕದ ಗಿಡದ ಬಳಿ ಎಸೆದು ಆರ್.ಎಂ.ಸಿ ಸಿಗ್ನಲ್ ಕಡೆಗೆ ಓಡಿ ಹೋದ ಎಂದದು ಹೇಳಿರುತ್ತೀರಿಯೇ ಎಂದರೆ ಸಾಕ್ಷಿಯು ಹೇಳಿರಬಹುದು ಎಂದು ನುಡಿಯುತ್ತಾರೆ. ಸದರಿ ಆರೋಪಿ ಸ್ಥಳದಲ್ಲಿ ಎಷ್ಟು ಹೊತ್ತು ಕುಳಿತಿದ್ದನು ಎಂದರೆ ಸಾಕ್ಷಿಯು 10 ರಿಂದ 15 ನಿಮಿಷ ಕುಳಿತಿದ್ದನು ಎಂದು ನುಡಿಯುತ್ತಾರೆ. ಪೊಲೀಸರು ಬರುವವರೆಗೆ ಕುಳಿತಿರುತ್ತಾನೆಯೇ ಎಂದರೆ ಸಾಕ್ಷಿಯು ಪೊಲೀಸರು ಬರುವಷ್ಟರಲ್ಲಿ ಹೊರಟು ಹೋದನು ಎಂದು ನುಡಿಯುತ್ತಾರೆ.

ಮುಖ್ಯ ವಿಚಾರಣೆಯಲ್ಲಿ ಆರೋಪಿ ಪಕ್ಕದಲ್ಲಿ ಕುಳಿತಿರುತ್ತಾನೆ ಎಂದು ಹೇಳಿದ್ದು, ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಆತ ವಯಸ್ಸಾದ ಗಂಡಸಿಗೆ ಸಿಮೆಂಟ್ ಇಟ್ಟಿಗೆ ಚೂರಿಗಿನಿಂದ ಹೊಡೆಯುತ್ತಿದ್ದ ಮತ್ತು ನಿಮ್ಮನ್ನು ನೋಡಿ ಓಡಿ ಹೋದ ಎಂದು ವಿಚಾರದಲ್ಲಿ ಯಾವುದು ಸರಿ ಎಂದರೆ ಸಾಕ್ಷಿ ಆತ ಅಲ್ಲಿಯೇ ಕುಳಿತಿದ್ದು , ನಂತರ ಅಲ್ಲಿಂದ ಸಿಗ್ನಲ್ ಕಡೆಗೆ ನಡೆದುಕೊಂಡು ಹೋದ ಎಂದು ನುಡಿಯುತ್ತಾರೆ. ನೀವು ಹೋದಾಗ ಹೊಡೆಯುತ್ತಿದ್ದ ಎಂದು ಹೇಳಿದ ವಿಚಾರ ಸರಿಯೇ? ಎಂದರೆ ಸಾಕ್ಷಿಯು ನಾನು ಅಲ್ಲಿಗೆ ಹೋದಾಗ ಆತ ಅಲ್ಲಿ ಕುಳಿತಿದ್ದ ಎಂದು ನುಡಿಯುತ್ತಾರೆ.

ನೀವು ಹೋದಾಗ ಹೊಡೆಯುತ್ತಿದ್ದ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸಾಕ್ಷಿಯು ನಾನು ಹೋಗಿ ನೋಡಿದಾಗ ರಕ್ತ ಬರುತ್ತಿತ್ತು. ಹೊಡೆದಿರುವುದನ್ನು ನಾನು ನೋಡಿರುವುದಿಲ್ಲ.

ಈಗ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

**<u>ಮಧ್ಯಾಹ್ನ 3 ಗಂಟೆಗೆ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ –</u>**

ಮುಖ್ಯ ವಿಚಾರಣೆಯಲ್ಲಿ ಸದರಿ ಕಟ್ಟಡದಲ್ಲಿ ಇಬ್ಬರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ ಎಂದು ಹೇಳಿದ್ದು, ಸದರಿ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೀರಿಯೇ ಎಂದರೆ ಸಾಕ್ಷಿಯು ಹೇಳಿರಬಹುದು ನೆನಪಿಲ್ಲ ಎಂದು ನುಡಿಯುತ್ತಾರೆ. ಕಟ್ಟಡದಲ್ಲಿ ಇಬ್ಬರೇ ಎಂದು ಮೊದಲಬಾರಿ ನ್ಯಾಯಾಲಯದ ಮುಂದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಅಪರಿಚಿತ ವ್ಯಕ್ತಿಯನ್ನು ಮೊದಲ ಬಾರಿ ದುರಿಸ್ಥಿಯಲ್ಲಿದ್ದ ಕಟ್ಟಡ ಒಳಗೆ ನೋಡಿರುತ್ತೀರಿಯೇ? ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಪೊಲೀಸರ ಮುಂದೆ ಹೇಳಿದ ಹೇಳಿಕೆಯಲ್ಲಿ ನಾನು ಸಿಗರೇಟ್ ಸೇದಿ ಟೀ ಅಂಗಡಿಗೆ ವಾಪಸ್ಸು ಬರುವಾಗ, ಸದರಿ ದುರಸ್ಥಿ ಮಳಿಗೆಯ ಒಳಗಡೆ ಗೋಡೆ ಕಡೆಗೆ ಆದಂತೆ ವಯಸ್ಸಾದ ಅಪರಿಚಿತ ಗಂಡಸು ಮಲಗಿರುವುದನ್ನು ನೋಡಿದೆ. ವಯಸ್ಸಾದ ಅಪರಿಚಿತ ಗಂಡಸನನ್ನು ಈ ಹಿಂದೆ ನೋಡಿದ ಬಗ್ಗೆ ನೆನಪಿಸಿಕೊಂಡಾಗ

ಆತನನ್ನು 2 ದಿನಗಳ ಹಿಂದೆ ದಿಃ 20.06.2023 ರಂದು ರಾತ್ರಿ ಅಂದಾಜು 7 ಗಂಟೆಯಲ್ಲಿ ಮಾಹಿ ಟೀಸ್ಟಾಲಿಗೆ ಬಜ್ಜಿ ಕೇಳಿಕೊಂಡು ಬಂದಿದ್ದ ಬಗ್ಗೆ ಜ್ಞಾಪಕ ಬಂದಿದ್ದು, ಆಗ ಆತ ತುಂಬು ತೋಳಿನ ಷರಟು, ನೀಲಿ–ಕಪ್ಪು, ಪಾಚಿ, ಬಿಳಿ ಬಣ್ಣದ ಲುಂಗಿ ಮತ್ತು ಕಪ್ಪು–ಕೆಂಪು–ಹಸಿರು ಬಣ್ಣದ ಟವೆಲ್ ಹಾಕಿಕೊಂಡಿದ್ದ ಎಂದು ಹೇಳಿರುತ್ತೀರಿಯೇ? ಎಂದರೆ ಸಾಕ್ಷಿಯು ಇಲ್ಲ ಎಂದುದ ನುಡಿಯುತ್ತಾರೆ. ಹೇಳಿಕೆ ಭಾಗವನ್ನು ನಿಶಾನೆ ಡಿ–1(ಬಿ) ಎಂದು ಗುರುತಿಸಲಾಯಿತು.

ಕೊಚ್ಚಿಗೆ ಹೋಗಿ ತರಕಾರಿಯನ್ನು ಅನ್ ಲೋಡ್ ಮಾಡಿ ಮೈಸೂರಿಗೆ ಬಂದಿರುತ್ತೇನೆ ಎಂದು ಹೇಳಿದ್ದು, ಆಗ ಎಷ್ಟು ಗಂಟೆ ಆಗಿತ್ತು? ಎಂದರೆ ಸಾಕ್ಷಿಯು 7 ರಿಂದ 7.30 ಗಂಟೆ ಆಗಿರಬಹುದು ಎಂದು ನುಡಿಯುತ್ತಾರೆ. ಕೊಚ್ಚಿಗೆ ಹೋಗಿ ತರಕಾರಿಯನ್ನು ಅನ್ ಲೋಡ್ ಮಾಡುವಾಗ ಎಷ್ಟು ಗಂಟೆ ಆಗಿತ್ತು ಎಂದರೆ ಸಾಕ್ಷಿಯು ನನಗೆ ಅಷ್ಟಾಗಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ವಾಹನದಲ್ಲಿ ಬೇರೆ ಯಾರು ಇರಲಿಲ್ಲ. ಶ್ಯಾಮ್ ಲಾಲ್ ನಾಗಲೋಕ ಬಾರಿನ ರಮೇಶರವರನ್ನು ಅವರೇ ಖುದ್ದಾಗಿ ಹೋಗಿ ಕರೆದುಕೊಂಡು ಬಂದಿರುತ್ತಾರೆ. ಈ ಮೇಲೆ ಹೇಳಿದ ವಿಚಾರಗಳನ್ನು ರಮೇಶ್ ರವರಿಗೆ ತಿಳಿಸಿರುತ್ತೀರಿಯೇ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಈ ಹಿಂದೆ ಮುಖ್ಯ ವಿಚಾರಣೆಯಲ್ಲಿ ಶ್ಯಾಮ್ ಲಾಲ್ ರಮೇಶ್ ರವರಿಗೆ ಫೋನ್ ಮಾಡಿ ಕರೆದರು ಎಂದು ಹೇಳಿರುತ್ತೀರಿ? ಎಂದರೆ ಸಾಕ್ಷಿಯು ಪಕ್ಕದಲ್ಲಿಯೇ ಬಾರ್ ಇದ್ದು, ಅವರೇ ಖುದ್ದಾಗಿ ಹೋಗಿ ಕರೆದಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ವ್ಯಕ್ತಿಯನು ಅಂಬ್ಯುಲೆನ್ಸಗೆ ಹಾಕಲು ನಾನು ಸಹಾಯ ಮಾಡಿರುವುದಿಲ್ಲ. ಅಂಬ್ಯುಲೆನ್ಸರವರೇ ಎತ್ತಿಕೊಂಡು ಅಂಬ್ಯೂಲೆನ್ಸನಲ್ಲಿ ಮಲಗಿಸಿರುತ್ತಾರೆ. ಪೊಲೀಸರಿಗೆ ವಿಚಾರಗಳನ್ನು ತಿಳಿಸಿರುತ್ತೇನೆ. ಅವರು ಹೇಳಿಕೆಯನ್ನು ಪಡೆದುಕೊಂಡು ನನ್ನ ಸಹಿ ಪಡೆದಿರುತ್ತಾರೆ. ಮಾರನೇ ದಿನ

ಸದರಿ ವ್ಯಕ್ತಿ ತೀರಿಕೊಂಡ ಎಂದು ತಿಳಿದು ಬಂದಿರುತ್ತದೆ. ತನ್ನನ್ನು ನ್ಯಾಯಾಲಯಕ್ಕೆ ಯಾವ ಪೊಲೀಸರು ಕರೆದುಕೊಂಡು ಹೋಗಿದ್ದರು ಎಂದು ತಿಳಿದಿರುವುದಿಲ್ಲ. ಅವರು ತಮ್ಮ ವಾಹನದಲ್ಲಿಯೇ ನನ್ನನ್ನು ಕರೆದುಕೊಂಡು ಹೋಗಿದ್ದರು. ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಏನು ಹೇಳಬೇಕು ಎಂದು ಅವರು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ನ್ಯಾಯಾದೀಶರ ಮುಂದೆ ಕರೆದುಕೊಂಡು ಹೋಗುವ ಮುಂಚೆ ಪೊಲೀಸರು ಆರೋಪಿಯ ಪೋಟೋ ಮತ್ತು ಸಿಸಿಟಿವಿ ಪುಟೇಜ್ ಗಳನ್ನು ತೋರಿಸಿರುತ್ತಾರೆಯೇ? ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಿಸಿಟಿವಿ ಪುಟೇಜ್ ಮತ್ತು ಪೋಟೋಗಳನ್ನು ನ್ಯಾಯಾಲಯಕ್ಕೆ ಹೋದ ದಿನ ತೋರಿಸಿರುತ್ತಾರೆ. ಆದರೆ ನ್ಯಾಯಾಧೀಶರ ಮುಂದೆ ಹೋಗುವ ಮುಂಚೆ ತೋರಿಸಿರುವುದಿಲ್ಲ.

ಎಷ್ಟು ದಿನ ಮುಂಚೆ ಜೈಲಿಗೆ ಬರುವಂತೆ ನೋಟೀಸ್ ನೀಡಿದ್ದರು ಎಂದರೆ ಸಾಕ್ಷಿಯು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ನೋಟೀಸ್ ನೀಡಿದ್ದರ ಬಗ್ಗೆ ನನಗೆ ನೆನಪಿರುವುದಿಲ್ಲ. ಶ್ಯಾಮ್ ನನಗೆ ಗುರುತು ಹಚ್ಚಲು ಹೋಗಬೇಕು ಎಂದು ತಿಳಿಸಿರುತ್ತಾನೆ. ಸುಮಾರು ವರ್ಷಗಳಾದ್ದರಿಂದ ಸರಿಯಾಗಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಶ್ಯಾಮ್ ಎಷ್ಟು ದಿನಗಳ ಮುಂಚೆ ಹೇಳಿರುತ್ತಾನೆ ನನಗೆ ನೆನಪಿರುವುದಿಲ್ಲ. ವಿದ್ಯಾರಣ್ಯಂಪುರಂ ಪೊಲೀಸರು ನನ್ನನ್ನು ಕಾರಾಗೃಹಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಕಾರಾಗೃಹಕ್ಕೆ ಹೋಗುವ ಮುಂಚೆ ಪೊಲೀಸರು ಪೋಟೋಗಳನ್ನು ತೋರಿಸಿರುವುದಿಲ್ಲ. ಕಾರಾಗೃಹಕ್ಕೆ ಎಷ್ಟು ಗಂಟೆಗೆ ಹೋಗಿರುತ್ತೀರಿ? ಎಂದರೆ ಸಾಕ್ಷಿಯು ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಕಾರಾಗೃಹದ ಒಳಗಡೆ ನೇರವಾಗಿ ತಹಸೀಲ್ದಾರ್ ರವರನ್ನು ಬೇಟಿ ಆಗಿರುತ್ತಾನೆ. ಕಾರಾಗೃಹದಲ್ಲಿ ನಮ್ಮನ್ನು ಯಾರು ಕೂಡ ಕರೆದುಕೊಂಡು ಹೋಗಿರುವುದಿಲ್ಲ. ನಾನು, ರಮೇಶ ಮತ್ತು ಶ್ಯಾಮ್ ಲಾಲ್ ನೇರವಾಗಿ ತಹಸೀಲ್ದಾರ್ ರವರನ್ನು ಬೇಟಿ ಆಗಿರುತ್ತೇವೆ.

ರಮೇಶನಿಗೆ ಗುರುತು ಹಚ್ಚಲು ಕರೆಯಲಾಗಿರುತ್ತದೆಯೇ? ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಾರಾಗೃಹದಲ್ಲಿ ನಮ್ಮ ಅಂಗಶೋದನೆಯನ್ನು ಮಾಡಿರುತ್ತಾರೆ. ಎಷ್ಟು ಕಾಲವಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಅಲ್ಲಿ 6 ಜನರನ್ನು ನಿಲ್ಲಿಸಿದರು ಎಂದು ಹೇಳಿದ್ದು, ನೀವು ಹೋದ ನಂತರ ಸದರಿ ವ್ಯಕ್ತಿಗಳನ್ನು ನಿಲ್ಲಿಸಿದ್ದರೋ ಅಥವಾ ಅದಕ್ಕೂ ಮುಂಚೆ ನಿಲ್ಲಿಸಿದ್ದರೋ ಎಂದರೆ ಸಾಕ್ಷಿ ನಾವು ಹೋದ ನಂತರ ನಿಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವ್ಯಕ್ತಿಗಳು ಯಾವ ಬಟ್ಟೆಗಳು ಧರಿಸಿದ್ದರು ಎಂದು ಹೇಳಲು ಆಗುವುದಿಲ್ಲ. ಸದರಿ ವ್ಯಕ್ತಿಗಳು ಯಾವ ವಯಸ್ಸಿನವರು ಇದ್ದರು ಎಂದು ಹೇಳಲು ಆಗುವುದಿಲ್ಲ.

ಆರೋಪಿಯನ್ನು ಗುರುತಿಸಿರುತ್ತೇನೆ ಎಂದು ಹೇಳಿದ್ದು, ಆತ ಮೊದಲನೇ ಸುತ್ತಿನಲ್ಲಿ ಎಷ್ಟನೇ ಕ್ರಮಾಂಕದಲ್ಲಿ ನಿಂತಿದ್ದನು ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಮೂರು ಸುತ್ತಿನಲ್ಲಿಯೂ ಆರೋಪಿ ಎಷ್ಟನೇ ಕ್ರಮಾಂಕದಲ್ಲಿ ನಿಂತಿದ್ದ ಎಂದು ಹೇಳಲು ಆಗುವುದಿಲ್ಲ. ಮೂರು ಸುತ್ತಲೂ 6 ರಿಂದ 7 ಜನ ನಿಂತಿದ್ದರು. ತಹಸೀಲ್ದಾರ್ ರವರು ಯಾವ ಪ್ರಶ್ನೆಯನ್ನು ಕೇಳಿರುತ್ತಾರೆ ಎಂದು ನನಗೆ ಈಗ ನೆನಪಿರುವುದಿಲ್ಲ. ತಹಸೀಲ್ದಾರ್ ರವರು ನನಗೆ ನೋಟೀಸ್ ನೀಡಿರುವುದಿಲ್ಲ ಮತ್ತು ಅಲ್ಲಿ 6 ರಿಂದ 7 ಜನರು ನಿಲ್ಲಿಸಿರುವುದಿಲ್ಲ, ಅದರಲ್ಲಿ ನಾನು ಆರೋಪಿಯನ್ನು ಗುರುತಿಸಿರುವುದಿಲ್ಲ, ಸದರಿ ವಿಚಾರಗಳ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರ್.ಎಂ.ಸಿಯ ಬಳಿ ಚಿಂದಿ ಆಯುವವರು ಸಾಮಾನ್ಯವಾಗಿ ಸಾಕಷ್ಟು ಜನ ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಗೂಡ್ಸ ವಾಹನದ ಚಾಲಕನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿಃ- 21.07.2023 ರಂದು ಆರ್.ಎಂ.ಸಿ

ಯಾರ್ಡಿನಲ್ಲಿ ಇರಲಿಲ್ಲ, ನಾನು ಯಾವುದೇ ವಯಸ್ಸಾದ ವ್ಯಕ್ತಿಯನ್ನು ಮತ್ತು ಆರೋಪಿಯನ್ನು ನೋಡಿರುವುದಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಲ್ಲಿ ಇದ್ದಾಗ, ಶಬ್ದ ಕೇಳಿ ಶ್ಯಾಮ್ ಲಾಲ್ ದುರಸ್ಥಿ ಮಳಿಗೆ ಬಳಿ ಹೋದ, ನಂತರ ನಾನು ಹೋದೆ ಎಂದು ಹೇಳಿರ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಆ ದಿನ ಆರೋಪಿಯನ್ನು ನೋಡಿರುವುದಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರು ಚೇತನ್ ಅಲಿಯಾಸ್ ಮಹದೇವಸ್ವಾಮಿ ಎಂದು ತೋರಿಸಲು ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಘಟನೆಯ ದಿನ ಸ್ಥಳದಲ್ಲಿ ಇರಲಿಲ್ಲ,ಪೊಲೀಸರ ಹೇಳಿಕೆಯ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಗುರುತಿಸಿದ ವಸ್ತುಗಳನ್ನು ಸ್ಥಳದಲ್ಲಿ ನೋಡಿರುವುದಿಲ್ಲ, ಅವುಗಳನ್ನು ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.